ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2015-16ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ

1. ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 52ಜೈಅಯೋ 2015(ಭಾಗ-1) 2015 ದಿನಾಂಕ 08.03.2016
2. ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 52(1) ಜೈಅಯೋ 2015(ಭಾಗ-1)2015 ದಿನಾಂಕ 08.03.2016
3. ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 52(1) ಜೈಅಯೋ 2015(ಭಾಗ-1)2015 ದಿನಾಂಕ 08.03.2016
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2015-BG ದಿನಾಂಕ 20.11.2015

ಪ್ರಸ್ತಾವನೆ :

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, **2015-16**ನೇ ಸಾಲಿನ ರಾಜ್ಯ ಆಯವ್ಯಯದಡಿ **ರೂ.1256.00** ಲಕ್ಷಗಳನ್ನು ಕೇಂದ್ರ ಹಾಗೂ ರಾಜ್ಯ ಪಾಲಾಗಿ ಜಿಲ್ಲಾ ವಲಯದಡಿ ಹಂಚಿಕೆ ಮಾಡಿದೆ.

ಮೇಲೆ ಓದಲಾದ ಆದೇಶಗಳನ್ವಯ **2015-16**ನೇ ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸಹಾಯಧನ **ರೂ.863.50** ಲಕ್ಷಗಳನ್ನು ನಿಗದಿಪಡಿಸಿದ ಭೌತಿಕ ಗುರಿ / ಆಯವ್ಯಯ ಹಂಚಿಕೆ / ಬಿಡುಗಡೆಯಾದ ಅನುದಾನದ ಮಿತಿಗೊಳಪಟ್ಟು, ಸಂಬಂಧಿತ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ.

2015-16ನೇ ಸಾಲಿಗೆ ಸಂಬಂಧಿಸಿದಂತೆ ರೂ.101.69 ಲಕ್ಷಗಳು ಮಾತ್ರ ಆಯವ್ಯಯದಡಿ ಬಾಕಿ ಉಳಿದಿದ್ದು, ಸದರಿ ಅನುದಾನವನ್ನು ರಾಜ್ಯ ಸಹಾಯಧನವನ್ನಾಗಿ ಅನುದಾನದ ಲಭ್ಯತೆಯಿರುವ ಜಿಲ್ಲೆಗಳಿಗೆ ಲೆಕ್ಕ ಶೀರ್ಷಿಕೆ **2810-60-196-6-01**(ಯೋಜನೆ)ರಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/52/ಜೈಅಯೋ/2015(3)(ಭಾಗ-1) ಬೆಂಗಳೂರು, ದಿನಾಂಕ 11.03.2016**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015-16**ನೇ ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸಹಾಯಧನ **ರೂ.101.69** ಲಕ್ಷ(ಒಂದುನೂರಾ ಒಂದು **ಲಕ್ಷದ ಅರವತ್ತೊಂಬತ್ತು** ಸಾವಿರ **ರೂಪಾಯಿಗಳು ಮಾತ್ರ**)ಗಳನ್ನು ಅನುಬಂಧದಲ್ಲಿ ಹಂಚಿಕೆ ಮಾಡಿದಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿದ್ದು, ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡಬಾರದು, ವ್ಯಪಗತ ಮಾಡಬಾರದು ಹಾಗೂ **"ಗಾಂಧಿ ಸಾಕ್ಷಿ ಕಾಯಕ"** ತತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂಬ ಷರತ್ತಿಗೊಳಪಟ್ಟು ಈ ಅನುದಾನ ಬಿಡುಗಡೆ ಮಾಡಿದೆ.

ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01**(ಯೋಜನೆ)ರಡಿ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಹಾಗೂ ನಿಗದಿತ ನಮೂನೆಗಳಲ್ಲಿ ಸಿ.ಎ.ರವರಿಂದ ಆಡಿಟ್ ಮಾಡಿಸಿ ಹಣಬಳಕೆ ಪ್ರಮಾಣ ಪತ್ರವನ್ನು ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/40/ವೆಚ್ಚ-6 /2016 ದಿನಾಂಕ 02.03.2016 ರಲ್ಲಿ ಸಹಮತಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಕೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ತುಮಕೂರು ಮತ್ತು ಉತ್ತರ ಕನ್ನಡ.
3. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ತುಮಕೂರು ಮತ್ತು ಉತ್ತರ ಕನ್ನಡ.
5. ಖಜಾನೆಗಳ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
6. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 52 ಜೈಅಯೋ 2015(3)(ಭಾಗ-1) 2015,
ದಿನಾಂಕ 11.03.2016 ಕ್ಕೆ ಅನುಬಂಧ

| ಕ್ರ. ಸಂ | ಜಿಲ್ಲೆ | ಬಿಡುಗಡೆ ಮಾಡಿದ ರಾಜ್ಯ ಸಹಾಯಧನ (ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಬೆಂಗಳೂರು (ಗ್ರಾ) | 5.66 |
| 2 | ಬೆಂಗಳೂರು (ನ) | 0.36 |
| 3 | ಬಳ್ಳಾರಿ | 0.41 |
| 4 | ಬೀದರ್ | 6.78 |
| 5 | ವಿಜಯಪುರ | 9.13 |
| 6 | ಚಾಮರಾಜನಗರ | 1.42 |
| 7 | ಚಿಕ್ಕಮಗಳೂರು | 6.31 |
| 8 | ಚಿಕ್ಕಬಳ್ಳಾಪುರ | 8.28 |
| 9 | ದಾವಣಗೆರೆ | 2.99 |
| 10 | ಧಾರವಾಡ | 3.65 |
| 11 | ಗದಗ | 11.85 |
| 12 | ಹಾಸನ | 12.19 |
| 13 | ಹಾವೇರಿ | 10.89 |
| 14 | ಕೊಡಗು | 4.23 |
| 15 | ಕೋಲಾರ | 4.57 |
| 16 | ಕೊಪ್ಪಳ | 0.65 |
| 17 | ಮಂಡ್ಯ | 2.50 |
| 18 | ಮೈಸೂರು | 0.74 |
| 19 | ರಾಯಚೂರು | 3.65 |
| 20 | ತುಮಕೂರು | 2.39 |
| 21 | ಉತ್ತರ ಕನ್ನಡ | 3.05 |
| | ಒಟ್ಟು | **101.69** |

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.